ಸಂಪಾದಕೀಯ

*ಸಂತರು ನಡೆದ ಹಾದಿ – ೪*



# ಬುದ್ಧ ತೋರಿದ ದಾರಿ

**ಈ** ಪ್ರಪಂಚದಲ್ಲಿ ಉನ್ನತ ಆಧ್ಯಾತ್ಮಿಕ ಭಾವನೆಗಳನ್ನು ಬೋಧಿಸಿ, ಇಡೀ ಮಾನವ ಜನಾಂಗಕ್ಕೆ ಬೆಳಕು ಬೀರಿದ ಮಹಾತ್ಮರಲ್ಲೊಬ್ಬ ಭಗವಾನ್ ಬುದ್ಧ. ಅವನಿಂದ ಆರಂಭಗೊಂಡ ಧರ್ಮದ ಅನುಯಾಯಿಗಳ ಸಂಖ್ಯೆ ಎಷ್ಟು, ಮಹಾನ್ ಚಿಂತಕರ ಮೇಲೆ ಈ ವ್ಯಕ್ತಿ ಬೀರಿದ ಪ್ರಭಾವ ಎಂತಹದು, ಭೂಮಂಡಲದ ಎಷ್ಟು ದೇಶಗಳು ಅವನ ಧರ್ಮವನ್ನು ಅನುಸರಿಸುತ್ತವೆ — ಈ ಅಂಕಿಅಂಶಗಳನ್ನು ಅನುಸರಿಸಿ ಬುದ್ಧನ ಶ್ರೇಷ್ಠತೆಯನ್ನು ಅಳೆಯಲಾಗದು. ನಿಜ, ಪ್ರಪಂಚದ ಮಹಾನ್ ಧರ್ಮಗಳಲ್ಲಿ ಬೌದ್ಧ ಧರ್ಮವೂ ಒಂದು; ಬೌದ್ಧ ಮತೀಯರ ಸಂಖ್ಯೆ ಕೂಡ ದೊಡ್ಡದು. ಆದರೆ ಬುದ್ಧನ ವ್ಯಕ್ತಿತ್ವ ಎಲ್ಲಕಾಲಕ್ಕೆ, ಎಲ್ಲ ದೇಶಕ್ಕೆ ಅನ್ವಯವಾಗುವ ಹಲವು ಶ್ರೇಷ್ಠ ಅಂಶಗಳನ್ನು ಒಳಗೊಂಡಿತ್ತು ಎನ್ನುವುದು ಮುಖ್ಯ.

ಸ್ವಾಮಿ ವಿವೇಕಾನಂದರ ಈ ಮಾತುಗಳು ಗಮನಾರ್ಹ: ''ಬುದ್ಧನ ಜೀವನವೇ ಒಂದು ದೊಡ್ಡ ಆಕರ್ಷಣೆಯಾಗಿದೆ. ನನಗೆ ಬುದ್ಧನ ಜೀವನದ ಮೇಲೆ ಪ್ರೀತಿ, ಆದರೆ ಅವನ ಸಿದ್ಧಾಂತದ ಮೇಲೆ ಇಲ್ಲ. ನಾನು ಆ ಪವಿತ್ರಾತ್ಮನ ಶೀಲವನ್ನು ಎಲ್ಲರಿಗಿಂತ ಹೆಚ್ಚಾಗಿ ಗೌರವಿಸುತ್ತೇನೆ. ಅವನಲ್ಲಿದ್ದ ಧೈರ್ಯ, ನಿರ್ಭಯತೆ, ಅದ್ಭುತ ಪ್ರೇಮ! ಮಾನವನ ಹಿತಕ್ಕಾಗಿ ಅವನು ಜನ್ಮವೆತ್ತಿದ. ಇತರರು ತಮಗಾಗಿ ದೇವರನ್ನು ಹುಡುಕಿರಬಹುದು, ಸತ್ಯವನ್ನು ಹುಡುಕಿರಬಹುದು. ಆದರೆ ಈತ ತನಗಾಗಿ ಮಾತ್ರ ಸತ್ಯವನ್ನು ಹುಡುಕಲೆತ್ನಿಸಿದವನಲ್ಲ. ಜನರು ದುಃಖದಲ್ಲಿದ್ದುದರಿಂದ ಅವನು ಸತ್ಯವನ್ನು ಅರಸಿದ. ಅವರಿಗೆ ಹೇಗೆ ಸಹಾಯ ಮಾಡಬೇಕು ಎಂಬುದೊಂದೇ ಅವನ ಜೀವನದ ಏಕಮಾತ್ರ ಧ್ಯೇಯವಾಗಿತ್ತು. ಬದುಕಿರುವ ಪರ್ಯಂತ ಒಮ್ಮೆಯಾದರೂ ತನಗಾಗಿ ಯೋಚಿಸಿದವನಲ್ಲ ಅವನು.'' *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ. ೨, ಪು. ೪೯–೫೦)*

### ಹೃದಯ, ಬುದ್ಧಿಗಳ ಅತ್ಯುತ್ತಮ ಸಮಾಗಮ

ಶ್ರೇಷ್ಠ ಮಹಾತ್ಮರಲ್ಲಿ ಒಂದೋ ಬೌದ್ಧಿಕ ಉನ್ನತಿ ಕಂಡುಬರುತ್ತದೆ, ಅಥವಾ ಎಲ್ಲರನ್ನೂ ಸ್ವೀಕರಿಸುವ ಹೃದಯ ವೈಶಾಲ್ಯ ಕಂಡುಬರುತ್ತದೆ. ಈ ಎರಡೂ ಗುಣಗಳೂ ಒಬ್ಬರಲ್ಲೇ ಕಂಡುಬರುವುದು ಅಪರೂಪ. ಬುದ್ಧನಲ್ಲಿ ಈ ಎರಡೂ ಗುಣಗಳ ಅಪೂರ್ವ ಸಮಾಗಮವನ್ನು ಕಾಣುತ್ತೇವೆ.

ಬುದ್ಧನ ಜೀವನದಲ್ಲಿ ವೈರಾಗ್ಯ ಮೂಡಿಬಂದ ಕ್ಷಣದಿಂದಲೇ ಅವನ ಆಧ್ಯಾತಿಕ ಅನ್ವೇಷಣೆ ಆರಂಭವಾಯಿತು. ಎಲ್ಲ ದುಃಖ, ಸಾವು-ನೋವು, ರೋಗರುಜಿನ, ಕಷ್ಟಕೋಟಲೆಗಳಾಚೆ ಒಂದು ಸತ್ಯ ಇದೆಯೆ? ಈ ಎಲ್ಲ ಗೊಂದಲಗಳ ಅರ್ಥವೇನು? ಈ ಬಗೆಯ ಆಲೋಚನೆ ಅವನನ್ನು ಎಲ್ಲ ಬಗೆಯ ಪ್ರಚಲಿತ ಆಧ್ಯಾತ್ಮಿಕ ಸಾಧನೆಗಳ ಮೂಲಕ ಹಾದುಹೋಗುವಂತೆ ಮಾಡಿತು. ಅರ್ಥವಿಲ್ಲದ ಆಚರಣೆ, ಮೌಢ್ಯ, ಅತೀಂದ್ರಿಯ ಸಿದ್ಧಿಗಳನ್ನೆಲ್ಲ ಅವನು ಸ್ವಲ್ಪವೂ ಅಳುಕಿಲ್ಲದೆ ತಿರಸ್ಕರಿಸಿದ. ಪ್ರಚಂಡ ಇಚ್ಛಾಶಕ್ತಿ, ನಿರ್ಭೀತಿ, ದೃಢ ನಿಶ್ಚಯಗಳಿಂದ ಅವನು ಧ್ಯಾನನಿರತನಾದ. ಸತ್ಯವನ್ನು ಕಂಡೇ ತೀರಬೇಕೆಂಬ ಸ್ಥಿರ ಸಂಕಲ್ಪ ಅವನನ್ನು ನಿರ್ವಾಣದತ್ತ ಕರೆದೊಯ್ದಿತು. ಎಷ್ಟೋ ಅಡೆತಡೆ, ಪ್ರಲೋಭನೆ, ಅಮಾನುಷ ವಿಕ್ಷೇಪಗಳು ಅವನನ್ನು ವಿಚಲಿತಗೊಳಿಸಲು ಅಸಮರ್ಥವಾದವು.

ಕೊನೆಗೂ ಬುದ್ಧ ಪರಮಸತ್ಯದ ಬೆಳಕನ್ನು ಕಂಡ. ಅವನು ತನ್ನ ನಿರ್ವಾಣದ ಬಳಿಕ ಬಹು ದೀರ್ಘಕಾಲ ಬದುಕಿದ್ದ; ತಾನು ಬದುಕಿದ್ದ ಕೊನೆಯ ಕ್ಷಣದವರೆಗೂ ಇತರರಿಗೆ ಆ ಬೆಳಕನ್ನು ನೀಡುತ್ತಲೇ ಹೋದ. ಪ್ರತಿಯೊಬ್ಬರೂ ಸತ್ಯವನ್ನು ಕಾಣಬೇಕು, ಎಲ್ಲರೂ ದುಃಖಗಳಿಂದ ಮುಕ್ತರಾಗಿ ಚಿರಂತನ ಶಾಂತಿಯನ್ನು ಹೊಂದಬೇಕು ಎಂಬುದೇ ಅವನ ಆಶಯವಾಗಿತ್ತು. ತನ್ನ ಧರ್ಮ, ತನ್ನ ಶಿಷ್ಯಂದಿರು, ತನ್ನ ಅನುಯಾಯಿಗಳು – ಇತ್ಯಾದಿ ಸಾಂಸ್ಥಿಕ ಧರ್ಮದ ಅಂಗಗಳು ಮುಂದೊಂದು ದಿನ ಮೇಲುಗೈ ಪಡೆದು, ವೈದಿಕ ಹಾಗೂ ಬೇರೆ ಧರ್ಮಗಳೊಡನೆ ಸೆಣಸಾಡಿದ್ದರೆ, ಅದು ಚಾರಿತ್ರಿಕ ದುರಂತ; ಅದು ಬುದ್ಧನ ಮಾರ್ಗವಲ್ಲ. ಶಾಂತಿ, ಸತ್ಯ, ಆನಂದವನ್ನು ಹರಡುವ ಮಹಾತ್ಮರು ಮತಾಂಧತೆಗೆ ಹೇಗೆ ಕಾರಣರಾಗುತ್ತಾರೆ?

ಆದರೆ ಬುದ್ಧನು ಆಗ ಪ್ರಚಲಿತವಿದ್ದ ಕಂದಾಚಾರಗಳನ್ನು ಖಂಡಿಸಿದ್ದನು. ಸಮಾಜದ ವಿಘಟನೆಗೆ ಕಾರಣವಾಗುವ ಜಾತಿಪದ್ಧತಿ, ವರ್ಣಭೇದ, ಉಚ್ಚ-ನೀಚ ಭೇದ, ಮೂಢನಂಬಿಕೆಗಳಿಂದ ಎಲ್ಲ ಅನಾಚಾರಗಳು ಉದ್ಭವವಾಗುತ್ತವೆ ಎಂದು

ಅವನು ಮನಗಂಡಿದ್ದನು. ಈ ಕಾರಣದಿಂದ ಅವನು ಕಟ್ಟಿದ ಹೊಸ ಧರ್ಮದಲ್ಲಿ ಯಾವುದೇ ಸಂಕುಚಿತಭಾವಕ್ಕೆ, ಭೇದಭಾವಗಳಿಗೆ ಸ್ಥಾನವಿರಲಿಲ್ಲ. ರಾಜ ಮಹಾರಾಜರುಗಳಿಂದ ಹಿಡಿದು ಭಿಕ್ಷುಕ, ಬಡವ, ಸಾಮಾನ್ಯ, ವಂಚಕ, ವೇಶ್ಯೆಯವರೆಗೂ ಅವನ ಅನುಯಾಯಿಗಳಾದರು. ಹಲವು ಶತಮಾನಗಳಿಂದ ಜಡವಾಗಿದ್ದ, ಕಂದಾಚಾರಗಳಲ್ಲಿ ಮುಳುಗಿದ್ದ ವೈದಿಕಧರ್ಮಕ್ಕೆ ಇದರಿಂದ ಬಲವಾದ ಹೊಡೆತ ಬಿತ್ತು. ಒಂದು ರೀತಿಯಲ್ಲಿ ಅದರ ಪುನಶ್ಚೇತನಕ್ಕೂ ಕಾರಣವಾಯಿತು.

ಹೊಸಮಾರ್ಗವನ್ನು ತುಳಿದು ಸತ್ಯವನ್ನು ಕಾಣುವ ಪ್ರಚಂಡ ಬುದ್ಧಿ, ಹಾಗೂ ಎಲ್ಲರಿಗೂ ಈ ಮಾರ್ಗದ ಬಾಗಿಲನ್ನು ತೆರೆದ ವಿಶಾಲ ಹೃದಯ — ಇವು ಬುದ್ಧನ ಪರಿಪೂರ್ಣ ವ್ಯಕ್ತಿತ್ವವನ್ನು ಪ್ರಕಾಶಪಡಿಸುತ್ತವೆ. ಸ್ವಾಮೀಜಿ ಹೇಳುತ್ತಾರೆ: ''ಹೃದಯ ಹಾಗೂ ಮಸ್ತಿಷ್ಕಗಳ ಅತ್ಯುತ್ತಮ ಸಮಾಗಮ ಹಾಗೂ ಚೈತನ್ಯ ಶಕ್ತಿಯ ಅಭಿವ್ಯಕ್ತಿಗಳಲ್ಲಿ ಇವನನ್ನು ಮೀರಿಸುವ ಮತ್ತೊಬ್ಬ ವ್ಯಕ್ತಿ ಹುಟ್ಟಿಲ್ಲ.''

## ಮಧ್ಯಮ ಮಾರ್ಗ

ಗೀತೆಯಲ್ಲಿ ಶ್ರೀಕೃಷ್ಣನು ಸಮತ್ವ, ಸಮತೋಲನವನ್ನು ಬೋಧಿಸುವಂತೆ, ಬುದ್ಧನು ತನ್ನ ಉಪದೇಶಗಳಲ್ಲಿ ಮಧ್ಯಮ ಮಾರ್ಗವನ್ನು ಉಪದೇಶಿಸುತ್ತಾನೆ: ''ಓ ಭಿಕ್ಷುಗಳೇ, ನನ್ನ ಉಪದೇಶವನ್ನು ಕೇಳಿ. ಎರಡೂ ಅತಿರೇಕಗಳಿಂದ ದೂರವಿರುವ ಮಧ್ಯ ಪಂಥವನ್ನು ನಿಮಗೆ ತಿಳಿಸುವೆ. ಕಷ್ಟಗಳನ್ನು ಅನುಭವಿಸುವುದರಿಂದ ದುರ್ಬಲನಾದ ಸಾಧಕನ ಮನಸ್ಸಿನಲ್ಲಿ ಗೊಂದಲಮಯ ಆರೋಗ್ಯಕರ ಚಿಂತನೆಗಳೇ ಏಳುತ್ತವೆ. ಪ್ರಾಪಂಚಿಕ ಜ್ಞಾನವನ್ನು ಗಳಿಸಬೇಕಾದರೂ ಶರೀರದಂಡನೆ ಉಚಿತವಲ್ಲ ಎಂದಾದ ಮೇಲೆ ಇಂದ್ರಿಯಗಳ ಮೇಲೆ ಹತೋಟಿಯನ್ನು ಸಾಧಿಸಬೇಕಾದರೆ ಈ ಮಾರ್ಗ ಹೇಗೆ ಉಪಯುಕ್ತವಾದೀತು?''

ಬುದ್ಧನಿಗೆ ಮಧ್ಯಮ ಮಾರ್ಗ ಲಭ್ಯವಾದುದು ಸ್ವಾನುಭವದಿಂದ. ಉಪವಾಸದಿಂದ ಅವನ ದೇಹವು ಕೃಶವಾಗಿ, ಮನಸ್ಸು ಕೆಲಸ ಮಾಡದೆ ಹೋದಾಗ, ಉನ್ನತ ಆಧ್ಯಾತ್ಮಿಕ ಚಿಂತನೆ ಅಸಾಧ್ಯವೆಂಬುದು ಆತನಿಗೆ ಮನವರಿಕೆಯಾಯಿತು. ಮಹಿಳೆಯೊಬ್ಬಳು ನೀಡಿದ ಪಾಯಸವನ್ನು ಅವನು ಸ್ವೀಕರಿಸಿದ. ಈ ಮೂಲಕ, ಮಧ್ಯಮ ಮಾರ್ಗವೇ ಸಾಧನೆಗೆ ಅತ್ಯಂತ ಸೂಕ್ತವೆಂಬುದನ್ನು ಕಂಡುಕೊಂಡ.

''ಜೀವನಕ್ಕೆ ಬೇಕಾಗುವ ಆವಶ್ಯಕತೆಗಳನ್ನು ಮಾತ್ರ ಪೂರೈಸುವುದು ತಪ್ಪಲ್ಲ. ಶರೀರವನ್ನು ಆರೋಗ್ಯವಾಗಿಟ್ಟುಕೊಳ್ಳುವುದು ಕರ್ತವ್ಯ; ಇಲ್ಲದಿದ್ದರೆ ಜ್ಞಾನದ ದೀಪದ ಬತ್ತಿಯನ್ನು ಹೊಸೆಯುವ ಸಾಮರ್ಥ್ಯ ಇಲ್ಲದಾಗುತ್ತದೆ, ಮನಸ್ಸು ದೃಢವಾಗಿರದೆ ತಿಳಿಯಾದ ಆಲೋಚನೆಯೂ ಅಸಾಧ್ಯವಾಗುತ್ತದೆ'' ಎನ್ನುತ್ತಾನೆ ಬುದ್ಧ. *(ಅಲ್ಲೇ, ಪು. ೨೫)*

ಶರೀರ, ಮನಸ್ಸು ಎರಡೂ ಬಾಹ್ಯ ಸಲಕರಣೆಗಳು. ಇವುಗಳನ್ನು ಆರೋಗ್ಯಕರವಾಗಿ ಇಟ್ಟುಕೊಂಡೇ ಈ ಹಂತವನ್ನು ದಾಟಿ ಉನ್ನತ ಆಧ್ಯಾತ್ಮಿಕ ಹಂತಕ್ಕೇರಬೇಕು. ಆಗಲೇ ಏಕಮುಖಿಯಾದ ಚಿಂತನೆ, ಧ್ಯಾನ ಸಾಧ್ಯವಾಗುವುದು. ಸತ್ಯದ ಸಾಕ್ಷಾತ್ಕಾರಕ್ಕೆ ಇದೇ ಮಾರ್ಗ ಎಂದು ಬುದ್ಧನು ಸಾರುತ್ತಾನೆ.

## ಶುದ್ಧ ಆಧ್ಯಾತ್ಮಿಕ ಮಾರ್ಗ

ಧರ್ಮದ ಹೆಸರಿನಲ್ಲಿ ಜನಸಾಮಾನ್ಯರನ್ನು ವಂಚಿಸುತ್ತಿದ್ದ ಪುರೋಹಿತ ವರ್ಗ, ಕಂದಾಚಾರದ ಮೂಲಕ ಅಜ್ಞಾನವನ್ನೇ ಅವಲಂಬಿಸಿದ ಸಮಾಜ — ಇವುಗಳಿಂದ ಶುದ್ಧ ಆಧ್ಯಾತ್ಮಿಕ ಮಾರ್ಗವನ್ನು ಪ್ರತ್ಯೇಕಿಸಿದವನು ಬುದ್ಧ. ಒಬ್ಬ ಮಹಾತ್ಮ ಹುಟ್ಟಿ ಬರುತ್ತಾನೆ, ಅದ್ಭುತ ಸತ್ಯಗಳನ್ನು ಕಂಡು, ಜನರಿಗೆ ಅವುಗಳನ್ನು ಬೋಧಿಸಿ ಅವನು ಮರೆಯಾಗುತ್ತಾನೆ. ಕೆಲವು ಕಾಲ ಅವನ ಜೀವನ-ಬೋಧನೆಗಳ ಪ್ರಭಾವ ಜನರ ನಡುವೆ ಹರಿದಾಡುತ್ತದೆ. ಎಷ್ಟೋ ಜನರು ಅದರಿಂದ ಬೆಳಕನ್ನು ಕಂಡರೂ, ಕಾಲ ಕ್ರಮೇಣ ಮತ್ತೆ ಕಂದಾಚಾರ-ಅಜ್ಞಾನ-ಅನಾಚಾರಗಳು ಈ ಮಾರ್ಗದಲ್ಲೂ ನುಸುಳುತ್ತದೆ; ಅದರಿಂದ ಮತ್ತೆ ಜನರು ಕತ್ತಲಲ್ಲಿ ತೊಳಲಾಡುತ್ತಾರೆ. ಇಂತಹ ಬದಲಾವಣೆಗಳು ಮತ್ತೆ ಮತ್ತೆ ಭಾರತದಲ್ಲಿ ನಡೆದಿವೆ. ವೇದಕಾಲದ ಋಷಿಗಳು ಕಂಡ ಪರಮ ಸತ್ಯಗಳನ್ನು ಜನರು ಮರೆತರು, ಕಂದಾಚಾರಗಳಲ್ಲಿ ಮುಳಗಿದರು. ಆಗ ಬುದ್ಧನು ಅದೇ ಸತ್ಯಗಳನ್ನು ಹೊಸ ಭಾಷೆಯಲ್ಲಿ ಬೋಧಿಸಿದ; ಮತ್ತೆ ಜನರಿಗೆ ಬೆಳಕನ್ನು ನೀಡಿದ. ''ಬುದ್ಧನು ಈ ಅನವಶ್ಯಕವಾದ ಕಳೆಯನ್ನೆಲ್ಲಾ ಕಿತ್ತ. ಅವನು ಅದ್ಭುತವಾದ ಸತ್ಯಗಳನ್ನು ಬೋಧಿಸಿದ. ಭೇದಭಾವಗಳಿಲ್ಲದ ವೇದಗಳ ತತ್ತ್ವ ಸಾರವನ್ನೇ ಎಲ್ಲರಿಗೂ ಬೋಧಿಸಿದ. ಅವನು ಇಡೀ ಪ್ರಪಂಚಕ್ಕೆ ಅದನ್ನು ಬೋಧಿಸಿದ. ಮಾನವರೆಲ್ಲ ಸಮಾನರು ಎಂಬುದು ಅವನು ಬೋಧಿಸಿದ ಘನ ಸಂದೇಶಗಳಲ್ಲಿ ಒಂದಾಗಿತ್ತು'' ಎನ್ನುತ್ತಾರೆ ಸ್ವಾಮೀಜಿ. *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ. ೭, ಪು. ೪೪)*

ಸಂಪೂರ್ಣ ನಿಸ್ವಾರ್ಥರಾಗಿ, ಒಂದು ಇರುವೆಗಾಗಿಯೂ ನಿಮ್ಮ ಪ್ರಾಣವನ್ನು ಅರ್ಪಿಸಲು ಸಿದ್ಧರಾಗಿ; ಯಾವ ಮೂಢ ನಂಬಿಕೆಗಾಗಿಯೂ ಕೆಲಸ ಮಾಡಬೇಡಿ. ನಿಮ್ಮ ಅಹಂಕಾರವನ್ನು ಅಳಿಸಿ ನಿರ್ವಾಣವನ್ನು ಪಡೆಯಲು ಮಾತ್ರ ಕೆಲಸ ಮಾಡಿ — ಇದು ಬುದ್ಧನ ಉಪದೇಶ. ಸ್ವಾರ್ಥಶೂನ್ಯವಾದ ಮನಸ್ಸು ಮಾತ್ರವೇ ಪರಿಶುದ್ಧವಾದ ಸತ್ಯವನ್ನು ಕಾಣಲು ಸಮರ್ಥವಾಗುವುದು. ಸತ್ಯವನ್ನಾಚರಿಸುವುದು, ಪ್ರಾಮಾಣಿಕತೆ ಹಾಗೂ ದಯೆ -ಅನುಕಂಪೆ ಇವುಗಳೇ ನೈತಿಕ ಮಾರ್ಗಗಳು; ಮಾನವನ ಚಾರಿತ್ರ್ಯವನ್ನು ಶುದ್ಧಗೊಳಿಸುವುವು. ಪ್ರತಿಯೊಬ್ಬರಿಗೂ ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿಯಲು ಸಮಾನ ಅವಕಾಶವಿದೆ ಎಂದು ಬುದ್ಧ ಸಾರಿದ. ಇತಿಹಾಸದಲ್ಲೇ ಮೊದಲ ಬಾರಿಗೆ ಮಾನ

ವನ ಹೃದಯದಿಂದ ಈ ರೀತಿ ಅದ್ಭುತ ಪ್ರೇಮವು ಉಕ್ಕಿ ಹರಿಯಿತು ಎಂದು ಬುದ್ಧನ ವಿಷಯವಾಗಿ ಸ್ವಾಮೀಜಿ ಹೇಳುತ್ತಾರೆ.

### ಸರಳ ಬೋಧನೆ

ಎಲ್ಲ ಆಧ್ಯಾತ್ಮಿಕ ಮಹಾಪುರುಷರ ಬೋಧನೆಯ ಭಾಷೆ ಸರಳವಾಗಿರುತ್ತದೆ. ಇದಕ್ಕೆ ಅತ್ಯುತ್ತಮ ಉದಾಹರಣೆ ಬುದ್ಧನ ಉಪದೇಶಗಳು. ಅವನ ಕಾಲಕ್ಕೆ ಎಲ್ಲ ಆಧ್ಯಾತ್ಮಿಕ ಗ್ರಂಥಗಳೂ ಸಂಸ್ಕೃತದಲ್ಲಿದ್ದವು. ವೇದ-ಉಪನಿಷತ್ತುಗಳೇನೋ ಪುರಾತನ ಋಷಿಗಳ ಆಡುಮಾತಿನಲ್ಲೇ ರಚಿತವಾದವು; ಆದರೆ ಹಲವು ಶತಮಾನಗಳ ನಂತರ ಸಂಸ್ಕೃತ ಭಾಷೆ ಪರಿವರ್ತನೆಯಾಗುತ್ತ ಹೋಯಿತು. ಲೌಕಿಕ ಸಂಸ್ಕೃತವು ವೈದಿಕ ಸಂಸ್ಕೃತಕ್ಕಿಂತ ತುಂಬ ಭಿನ್ನವಾಗಿತ್ತು ; ಸಹಜವಾಗಿ ಸಾಮಾನ್ಯರಿಗೆ ವೈದಿಕ ಸಂಸ್ಕೃತ ಅರ್ಥವಾಗಲಿಲ್ಲ. ಅದೇ ಕಾರಣದಿಂದ ಹಲವು ವ್ಯಾಖ್ಯಾನ, ಭಾಷ್ಯ, ಟೀಕೆಗಳ ಸಹಾಯದಿಂದ ವೇದಗಳನ್ನು ಅರ್ಥಮಾಡಿಕೊಳ್ಳಬೇಕಾಗಿ ಬಂತು. ಹೀಗೆ ಭಾಷೆಯಲ್ಲಾಗುವ ಬದಲಾವಣೆಯಿಂದಾಗಿ, ಮುಂದೆ ಜನರಿಗೆ ಸಂಸ್ಕೃತವೂ ಅರ್ಥವಾಗದ ಪರಿಸ್ಥಿತಿಯುಂಟಾಯಿತು. ಆದರೆ ನಮ್ಮ ಶಾಸ್ತ್ರಗಳೆಲ್ಲ ಸಂಸ್ಕೃತದಲ್ಲೇ ಉಳಿದಿದ್ದ ಕಾರಣ ಯಾವುದೇ ಆಧ್ಯಾತ್ಮಿಕ ವಿಚಾರವಾಗಲಿ, ಅದು ಸಂಸ್ಕೃತದಲ್ಲಿಯೇ ಇರಬೇಕೆಂಬ ಭಾವನೆ ಬಲವಾಗಿತ್ತು.

ಈ ಭಾವನೆಗೆ ವಿರುದ್ಧವಾಗಿ, ತಾನು ಕಂಡ ಆಧ್ಯಾತ್ಮಿಕ ಸತ್ಯಗಳನ್ನು ಪಾಲಿ ಭಾಷೆಯಲ್ಲೇ ಬುದ್ಧ ಬೋಧಿಸಿದ. ಪಾಲಿ ಜನರ ಭಾಷೆಯಾಗಿತ್ತು. ಅವರ ಭಾಷೆಯಲ್ಲೇ ಅದನ್ನು ಸರಳವಾಗಿ ಹೇಳಿದರೆ, ಯಾವ ಗೊಂದಲವೂ ಇಲ್ಲದೆ ಅದು ಜನರನ್ನು ಮುಟ್ಟುವುದು ಎಂದು ಬುದ್ಧ ಅರಿತಿದ್ದ. ಈ ಸರಳ ಮಾರ್ಗ ಯಶಸ್ವಿಯಾಯಿತು. ಜನರು ಬುದ್ಧನನ್ನು ಹಾಗೂ ಅವನ ಉಪದೇಶಗಳನ್ನು ಸ್ವೀಕರಿಸಿದರು.

ಬುದ್ಧನ ಉಪದೇಶಗಳಲ್ಲಿ ಸರಳವಾದ ತತ್ತ್ವನಿರೂಪಣೆ ಕಂಡುಬರುತ್ತದೆ. ಬೌದ್ಧಧರ್ಮದ ಮುಂದಿನ ಹಂತಗಳಲ್ಲಿ ಹಲವು ತಾತ್ತ್ವಿಕ ಬೆಳವಣಿಗೆಗಳು ಉಂಟಾದರೂ, ಬುದ್ಧನು ನೀಡಿದ ಮೂಲ ಉಪದೇಶಗಳಲ್ಲಿ ಕಂಡುಬರುವ ತತ್ತ್ವಗಳು ಹೆಚ್ಚು ಜಟಿಲವಾಗಿಲ್ಲ; ಸುಲಭವಾಗಿ ಮನವರಿಕೆಯಾಗುತ್ತವೆ.

'ನಾಲ್ಕು ಆರ್ಯಸತ್ಯಗಳು' ಹೇಳುವ ಸಂಗತಿಗಳು ಹೀಗಿವೆ: ೧. **ದುಃಖದ ಅಸ್ತಿತ್ವ:** ಜೀವನದಲ್ಲಿ ದುಃಖವೆಂಬುದು ಒಂದಿದೆ – ಅದನ್ನು ಗುರುತಿಸಿ, ಒಪ್ಪಿಕೊಳ್ಳುವುದು. ೨. **ದುಃಖದ ಕಾರಣ:** ಎಲ್ಲ ದುಃಖಗಳಿಗೂ ಕಾರಣಗಳಿರುತ್ತವೆ. ಅವುಗಳನ್ನು ಅರಿತಲ್ಲದೆ ಅವುಗಳಿಗೆ ಪರಿಹಾರ ಕಾಣಲಾಗದು. ೩. **ದುಃಖದ ಅವಸಾನ:** ದುಃಖ ಕೊನೆಗೊಳ್ಳಲು ಸಾಧ್ಯ ಎಂಬುದನ್ನು ಅರಿತುಕೊಳ್ಳುವುದು. ೪. **ದುಃಖಾವಸಾನದ ಮಾರ್ಗ:** ಯಾವ ವಿಧಾನದಿಂದ ದುಃಖವನ್ನು ಕೊನೆಗೊಳಿಸಬಹುದು ಎಂದರಿತು ಅದನ್ನು ಆಚರಿಸುವುದು. ಈ ಮೂಲ ತತ್ತ್ವಗಳನ್ನು ಅನುಸರಿಸಿ ಬುದ್ಧನು ಆಧ್ಯಾತ್ಮಿಕ ಉಪದೇಶಗಳನ್ನು ನೀಡುತ್ತಾನೆ.

ದಯೆಯನ್ನು ಕುರಿತಾಗಿ ಬುದ್ಧನು ಹೀಗೆ ಹೇಳುತ್ತಾನೆ: ''ಎಲ್ಲ ಜೀವಿಗಳ ಮೇಲೆ ದಯೆ – ಇದೇ ನಿಜವಾದ ಧರ್ಮ. ಇತರ ಜೀವಿಗಳ ಬಗ್ಗೆ ನಿನ್ನ ಹೃದಯದಲ್ಲಿ ಅಪರಿಮಿತ ಸದ್ಭಾವವನ್ನು ಬೆಳೆಸು.'' ಇತರರನ್ನು ನೋಯಿಸದಿರುವುದು, ಇತರರಿಗೆ ಸೇವೆ ಮಾಡುವುದು ಅವನ ಪ್ರಕಾರ ಸಾಧನೆಯೇ ಆಗುವುದು.

### ಮಾನವತೆಯ ಉದಾತ್ತ ವ್ಯಕ್ತಿತ್ವ

ಪ್ರಪಂಚದಲ್ಲಿ ಮೊದಲ ಬಾರಿಗೆ ಮಾನವನನ್ನು ದೈವೀ ನೆಲೆಗೇರಿಸಿ, ಇಡೀ ಮನುಕುಲವನ್ನೇ ಪ್ರೀತಿಸಿದ, ಎಲ್ಲ ಮಾನವರೂ ಒಂದೇ ಎಂದು ಕಂಡುಕೊಂಡ ಉದಾಹರಣೆಯನ್ನು ನಾವು ಬುದ್ಧನಲ್ಲಿ ಕಾಣುತ್ತೇವೆ. ಎಲ್ಲಿ ವರ್ಣ, ಜಾತಿ, ಲಿಂಗ, ಅಧಿಕಾರ-ಅಂತಸ್ತುಗಳ ಭೇದಕ್ಕೆ ಅನುಗುಣವಾಗಿ ಒಂದೊಂದು ನೀತಿಯನ್ನು ಅನುಸರಿಸಲಾಗುತ್ತಿತ್ತೋ, ಎಲ್ಲಿ ಕುಲ-ಗೋತ್ರಗಳ ಆಧಾರದಲ್ಲಿ ವಿದ್ಯೆ, ಆಧ್ಯಾತ್ಮ ಶಿಕ್ಷಣಗಳನ್ನು ನೀಡಲಾಗುತ್ತಿತ್ತೋ, ಅಲ್ಲಿ ಬುದ್ಧನ ಸರ್ವಸಮಾನ ತತ್ತ್ವಗಳು ಹೊಸ ಕ್ರಾಂತಿಯನ್ನೇ ಉಂಟುಮಾಡಿದವು. ಪತಿತರ, ದೀನ-ದಲಿತರ ಉದ್ಧಾರಕ್ಕಾಗಿ ಸಮಾಜದಲ್ಲಿ ಹೊಸ ಅವಕಾಶವುಂಟಾಯಿತು. ಎಲ್ಲ ಮಾನವರೂ ಉನ್ನತ ಜೀವನ ನಡೆಸಲು ಅರ್ಹರು ಎಂಬ ನೂತನ ವಿಚಾರಧಾರೆ ಬಲಗೊಂಡಿತು. ವಿವಿಧ ರೀತಿಯ ವಿಚ್ಛಿದ್ರಕಾರಿ, ಮತೀಯ ಹಾಗೂ ತಾರತಮ್ಯ ಭಾವನೆಗಳಿಂದ ಭಾರತವೂ ಸೇರಿದಂತೆ ಜಗತ್ತಿನ ಹಲವು ದೇಶಗಳು ತತ್ತರಿಸುತ್ತಿವೆ. ಈ ಕಾಲಕ್ಕೆ ಬುದ್ಧನ ಮಾನವತಾವಾದವು ಸಾಮರಸ್ಯದ ಔಷಧಿಯಾಗಿ ಕೆಲಸ ಮಾಡುವುದು. ಇದರರ್ಥ ಜಗತ್ತೆಲ್ಲವೂ ಬೌದ್ಧಧರ್ಮವನ್ನೇ ಅನುಸರಿಸಬೇಕೆಂದಲ್ಲ; ಬುದ್ಧನ ಜೀವನ-ಸಂದೇಶಗಳಲ್ಲಿರುವ ವಿಶ್ವವಿಶಾಲ ಭಾವನೆಗಳನ್ನು ಜಗತ್ತು ಅಳವಡಿಸಿಕೊಳ್ಳಬೇಕು ಎಂಬುದಾಗಿದೆ. ಎಲ್ಲರೂ ಅವರವರ ಧರ್ಮಗಳನ್ನು ಅನುಸರಿಸಲಿ; ಆದರೆ ಇತರ ಧರ್ಮಗಳೊಂದಿಗೆ ಸಾಮರಸ್ಯದಿಂದಿರಲಿ — ಎಲ್ಲಿ ಎಲ್ಲ ಧರ್ಮಗಳೂ ಒಪ್ಪುವ ಸಾರ್ವತ್ರಿಕ ಅಂಶಗಳಿವೆಯೋ, ಆ ತತ್ತ್ವಗಳು ಸಾರ್ವತ್ರಿಕವಾಗಿರಲಿ. ಇಡೀ ಜಗತ್ತೇ ಅವುಗಳನ್ನು ಸ್ವೀಕರಿಸುವಂತಾಗಲಿ. ಈ ರೀತಿಯಲ್ಲಿ ಜಗತ್ತು ಬುದ್ಧನನ್ನು ಅರಿತು ಅನುಸರಿಸಿದಾಗಲೇ ಅವನಿಗೆ ನಿಜವಾದ ಗೌರವವನ್ನು ಸಲ್ಲಿಸಿದಂತಾಗುವುದು. ❋

### ನವೆಂಬರ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೦೯ | ಗುರುವಾರ | ಏಕಾದಶಿ |
| ೧೨ | ಭಾನುವಾರ | ಶ್ರೀ ಕಾಳೀಪೂಜೆ |
| ೨೩ | ಗುರುವಾರ | ಏಕಾದಶಿ |
| ೨೪ | ಶುಕ್ರವಾರ | ಸ್ವಾಮಿ ಸುಬೋಧಾನಂದ ಜಯಂತಿ |
| ೨೬ | ಭಾನುವಾರ | ಸ್ವಾಮಿ ವಿಜ್ಞಾನಾನಂದ ಜಯಂತಿ |